# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 613 |
| ಸದಸ್ಯರ ಹೆಸರು | ಶ್ರೀ ಎಸ್.ರವಿ |
| ಉತ್ತರಿಸುವ ದಿನಾಂಕ | 12.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ಹಲವಾರು ಐತಿಹಾಸಿಕ ದೇವಸ್ಥಾನಗಳ ಗೋಡೆಗಳು ಬಿರುಕು ಬಿಟ್ಟಿರುವುದು ಶಿಲ್ಪಗಳು ವಿಕೃತಿಗೊಂಡಿರುವುದು. ರಕ್ಷಣೆ ಇಲ್ಲದೇ ಸೊರಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ರಾಜ್ಯದ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ಹಲವಾರು ಐತಿಹಾಸಿಕ ದೇವಸ್ಥಾನಗಳ ಗೋಡೆಗಳು ಬಿರುಕು ಬಿಟ್ಟಿರುವುದು, ಶಿಲ್ಪಗಳು ವಿಕೃತಿಗೊಂಡಿರುವುದು, ರಕ್ಷಣೆ ಇಲ್ಲದೇ ಸೊರಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
<tr><td>ಆ)</td><td>ಬಂದಿದ್ದಲ್ಲಿ, ಇಂತಹ ಎಷ್ಟು ದೇವಸ್ಥಾನಗಳನ್ನು ಗುರುತಿಸಲಾಗಿದೆ ಮತ್ತು ಅವು ಯಾವುವು:<br>ಪುನರುಜ್ಜೀವನಗೊಳ್ಳದೇ ಅವಸಾನದ ಅಂಚಿಗೆ ತಲುಪಿರುವ ದೇವಸ್ಥಾನಗಳು ಎಷ್ಟು? (ಸಂಪೂರ್ಣ ವಿವರ ನೀಡುವುದು)</td><td>2022-23ನೇ ಸಾಲಿನಲ್ಲಿ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರಿಂದ ಸ್ವೀಕೃತವಾದ ಪ್ರಸ್ತಾವನೆಯನ್ವಯ ಕಾಯಕಲ್ಪ ಯೋಜನೆಯಡಿ ಧಾರ್ಮಿಕ ಇಲಾಖೆ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಿಗೆ ಅನುದಾನ ಕೋರಿ 31 ಜಿಲ್ಲೆಗಳಿಂದ ಸ್ವೀಕೃತವಾಗಿರುವ ಪ್ರಸ್ತಾವನೆಗಳಲ್ಲಿ ಒಟ್ಟು 477 ಸಂಸ್ಥೆಗಳಿಗೆ ಅನುದಾನ ಕೋರಲಾಗಿರುತ್ತದೆ. ಆದರೆ 477 ಸಂಸ್ಥೆಗಳ ಪೈಕಿ 456 ಸಂಸ್ಥೆಗಳು ಅಧಿಸೂಚಿತ ಸಂಸ್ಥೆಗಳಾಗಿದ್ದು, ಉಳಿದ 21 ಸಂಸ್ಥೆಗಳು ಅಧಿಸೂಚಿತ ಸಂಸ್ಥೆಯಾಗಿರುವುದಿಲ್ಲ. ಸ್ವೀಕೃತವಾಗಿರುವ 456 ಸಮೂಹ 'ಸಿ' ಅಧಿಸೂಚಿತ ಸಂಸ್ಥೆಗಳಿಗೆ ತಲಾ ರೂ.5.00 ಲಕ್ಷಗಳಂತೆ ಒಟ್ಟು ರೂ.2275.00 ಲಕ್ಷಗಳನ್ನು ಕಾಯಕಲ್ಪ ಯೋಜನೆಯಡಿ ಅನುದಾನ ಮಂಜೂರು ಮಾಡುವಂತೆ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ.<br><br>(ರೂ.ಲಕ್ಷಗಳಲ್ಲಿ)
<table>
<tr><th>ಅನುದಾನ ಕೋರಿ ಜಿಲ್ಲಾವಾರು ಸ್ವೀಕೃತವಾಗಿರುವ ಧಾರ್ಮಿಕ ಸಂಸ್ಥೆಗಳು</th><th>ಅಧಿಸೂಚಿತ "ಸಿ" ವರ್ಗದ ಧಾರ್ಮಿಕ ಸಂಸ್ಥೆಗಳು</th><th>ಕೋರಿರುವ ಮೊತ್ತ</th><th>ಅನುದಾನ ಬಿಡುಗಡೆಯಾದ ಅಧಿಸೂಚಿತ ಸಂಸ್ಥೆಗಳು</th><th>ಅನುದಾನ ಬಿಡುಗಡೆಯಾದ ಮೊತ್ತ</th></tr>
<tr><td>477</td><td>456</td><td>2275.00</td><td>84</td><td>800.00</td></tr>
</table>
<br>ದೇವಾಲಯಗಳ ಮಾಹಿತಿಯು ಅಧಿಕವಾಗಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.<br><br>ಸರ್ಕಾರವು 2022-23ನೇ ಸಾಲಿನ ಆಯವ್ಯಯದಲ್ಲಿನ ಲೆಕ್ಕ ಶೀರ್ಷಿಕೆ:4059-80-051-0-52(386)ರಲ್ಲಿ ಒದಗಿಸಿರುವ ಅನುದಾನದಲ್ಲಿ ಪ್ರತಿ ಜಿಲ್ಲೆಯ ಪ್ರವರ್ಗ 'ಸಿ' ಶ್ರೇಣಿಯ ಕನಿಷ್ಟ 10 ದೇವಾಲಯಗಳಿಗೆ ತಲಾ ರೂ.5.00 ಲಕ್ಷಗಳಂತೆ, ಅನುದಾನ ನೀಡಿ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿರುತ್ತದೆ.</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಅದರಂತೆ, 2022-23ನೇ ಸಾಲಿನ ಆಯವ್ಯಯದ ಲಭ್ಯತೆಗನುಗುಣವಾಗಿ ಸರ್ಕಾರದ ಆದೇಶ ಸಂಖ್ಯೆ:ಕಂಇ 138 ಮುಅಬಿ 2023, ದಿನಾಂಕ:27.03.2023ರಲ್ಲಿ, ರಾಜ್ಯದ 84 ಮುಜರಾಯಿ ದೇವಾಲಯಗಳಿಗೆ ರೂ.800.00 ಲಕ್ಷಗಳ ಅನುದಾನ ಮಂಜೂರಾಗಿದ್ದು, ಅನುದಾನ ಬಿಡುಗಡೆಯಾಗಿರುತ್ತದೆ. |

ಸಂಖ್ಯೆ: ಕಂಇ 78 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು